# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572103

**ಸಂಖ್ಯೆ: ತುವಿ:ವಿ.ವಿ.ಪ/ಸಿಂ.ವಿ:2024-25** - 755

**ದಿನಾಂಕ: 21.06.2025**

## ಸುತ್ತೋಲೆ

**ವಿಷಯ:** **ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಪ್ರಾಧಿಕಾರದ ಸದಸ್ಯತ್ವದ ಆಯ್ಕೆಗಾಗಿ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವ ಕುರಿತು.**

**ಉಲ್ಲೇಖ:** **ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 20.06.2025**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28 (01) (ಎಫ್) ರಲ್ಲಿ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರುಗಳನ್ನು (ಒಬ್ಬ ಮಹಿಳಾ ಪ್ರಾಂಶುಪಾಲರು ಸೇರಿದಂತೆ) ಒಂದು ವರ್ಷದ ಅವಧಿಗೆ ಜೇಷ್ಠತೆ ಮತ್ತು ಸರದಿ ಆಧಾರದ ಮೇಲೆ ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಬೇಕಾಗಿರುತ್ತದೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 30 (01) (vi) ರಲ್ಲಿ ಸಂಯೋಜಿತ ಕಾಲೇಜುಗಳ ಹತ್ತು ಪ್ರಾಂಶುಪಾಲರುಗಳನ್ನು ವಿದ್ಯಾವಿಷಯಕ ಪರಿಷತ್‌ಗೆ ನಾಮನಿರ್ದೇಶನ ಮಾಡಬೇಕಾಗಿರುತ್ತದೆ. ಈ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪ್ರಾಂಶುಪಾಲರುಗಳಾಗಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ಮಾನದಂಡಗಳನ್ನು ಹೊಂದಿರುವ ಪ್ರಾಂಶುಪಾಲರುಗಳು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧ-01 ರಲ್ಲಿ ಎಲ್ಲಾ ವಿವರಗಳನ್ನು ಭರ್ತಿ ಮಾಡಿ ಪ್ರತಿಯನ್ನು **ದಿನಾಂಕ: 11.07.2025ರ** ಒಳಗಾಗಿ ತಪ್ಪದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು ಹಾಗೂ ಸದರಿ ಮಾಹಿತಿಯನ್ನು ಇ-ಮೇಲ್ http://drsyndicatetut@gmail.com ವಿಳಾಸಕ್ಕೆ ತಪ್ಪದೇ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಸದರಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಅನುಸರಿಸಿರುವ ಮಾರ್ಗಸೂಚಿಯು ಈ ಕೆಳಕಂಡಂತಿದೆ.

Seniority is determined with reference to the length of service in the substantive post of the Principal's cadre, subject to the following conditions:

a) The Principals who served longer length of service are treated as senior to those who served lesser number of years of service in the cadre of principals.
b) Principals should be drawing UGC or equivalent running pay scale of Rs.1,31,400-2,17,100 or Rs. 1,44,200-,2,18,200 (AS per the revised seventh pay Scale)
c) Where the relative seniority is same it will be determined on the basis of the date of birth.
d) The Principals, who have attained the age of superannuation, temporary, drawing the pay scale less than Rs.1,31,400-2,17,100 or rs 1,44,200-,2,18,200are not eligible for inclusion of their name in the Seniority list.
e) The period of nomination as prescribed under KSU Act-2000

ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಸೇವಾ ವಿವರಗಳನ್ನು ತಮ್ಮ ಸಂಸ್ಥೆಯ ಕಾರ್ಯದರ್ಶಿಯವರಿಂದ ತಪ್ಪದೇ ದೃಢೀಕರಿಸಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/-

**ಕುಲಸಚಿವರು**

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

**ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜಿತ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,**

**ಸೂಚನೆ:** ಮೇ-2025ರ ವೇತನ ಶ್ರೇಣಿ (Payslip) ಮತ್ತು ಪ್ರಾಂಶುಪಾಲರ ನೇಮಕದ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

**ಪ್ರತಿಗಳು:**

1) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- (ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುವುದು)
3) ಕಚೇರಿ ಪ್ರತಿ.

# ಅನುಬಂಧ-01

ಪ್ರಾಂಶುಪಾಲರ ಸೇವಾ ಜೇಷ್ಠತಾ ವಿವರ

| ಕ್ರ ಸಂ | ಪ್ರಾಂಶುಪಾಲರ ಪೂರ್ಣ ಹೆಸರು | ಕಾಲೇಜಿನ ಹೆಸರು ಮತ್ತು ವಿಳಾಸ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸೇವಾ ವಯೋ ನಿವೃತ್ತಿ ದಿನಾಂಕ | ಪ್ರಾಂಶುಪಾಲರಾಗಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನಲ್ಲಿ ಸೇವೆಗೆ ಸೇರಿದ ದಿನಾಂಕ | ಯುಜಿಸಿ ವೇತನ ಶ್ರೇಣಿ ಪಡೆಯಲಾಗುತ್ತಿದೆಯೇ? | ವೇತನ ಶ್ರೇಣಿ | ಪ್ರಸ್ತುತ ಮೂಲ ವೇತನ | ಪ್ರಾಂಶುಪಾಲರ ಹುದ್ದೆಯ ಲಕ್ಷಣ ಖಾಯಂ/ ತಾತ್ಕಾಲಿಕ, ಪ್ರಭಾರ) ಖಾಯಂ ಆಗಿದ್ದಲ್ಲಿ ಆದೇಶದ ಪ್ರತಿ ಸಲ್ಲಿಸುವುದು. | ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಒಟ್ಟು ನಿರಂತರ ಸೇವೆ | ಈ ಹಿಂದೆ ತುಮಕೂರು ವಿವಿಯಲ್ಲಿ ವಿದ್ಯಾ ವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿದ ವಿವರ | ಪ್ರಾಂಶುಪಾಲರ ಇತ್ತೀಚಿನ ದೂರವಾಣಿ ಮತ್ತು Whats App ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿವರ | ಷರಾ |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| | | | | | | | | | | | | | | |

ಸ್ಥಳ:

ದಿನಾಂಕ:

ಪ್ರಾಂಶುಪಾಲರ ಸಹಿ ಮತ್ತು ಮೊಹರು

**ಸೂಚನೆ:** ಮೇ–2025ರ ವೇತನ ಶ್ರೇಣಿ (Payslip) ಮತ್ತು ಪ್ರಾಂಶುಪಾಲರ ನೇಮಕದ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.